Tumbe Group of International Journal
A Peer Reviewed Multidisciplinary Journal
ISSN: 2581-8511
Volume- 3
Issue-1
January-April: 2020

# ಹೊಟ್ಟೆವ್ವ ಎಂಬ ದೀಪಾವಳಿ ಹಬ್ಬ

**ಮಂಜುನಾಥ ಪಾಟೀಲ**
ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ,
ರಾಣಿಚನ್ನಮ್ಮ ವಿಶ್ವವಿದ್ಯಾನಿಲಯ, ಬೆಳಗಾವಿ.591156
Ph: 8095258003. Email: manju86p@gmail.com

## ಪ್ರಸ್ತಾವನೆ

ಭಾರತ ದೇಶವು ವಿವಿಧ ಭಾಷೆ, ಜಾತಿ, ಧರ್ಮ, ಸಂಸ್ಕೃತಿ, ಆಚರಣೆಗಳಿಂದ ಕೂಡಿದೆ. ಭಾರತ ದೇಶವು ಹೆಸರಾಗಿರುವುದು ಇಲ್ಲಿನ ಆಚರಣೆಗಳಿಂದ ಎಂಬುದು ವಿಶೇಷ. ಈ ಆಚರಣೆಗಳಿಗೆ ತನ್ನದೆ ಆದ ಹಿನ್ನಲೆ ಮತ್ತು ಕಾರಣಗಳು ಇವೆಯಾದರೂ ವಿವಿಧತೆಯಲ್ಲಿ ಏಕತೆಯನ್ನು ನಂಬಿರುವ ದೇಶವಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ವಿವಿಧ ಧರ್ಮ, ಆಚರಣೆ, ಸಂಸ್ಕೃತಿಗಳನ್ನು ತೆಗೆದು ಹಾಕಿ ಒಂದೇ ಧರ್ಮ, ಒಂದೇ ಭಾಷೆ, ಒಂದೇ ಆಚರಣೆಯ ದೇಶವಾಗಿ ರೂಪಾಂತರಿಸುವ ಪ್ರಯತ್ನಗಳಾದರೂ ಸಹ ಜನರು ಮಾತ್ರ ತಮ್ಮ ಭಾಷೆ, ಆಚರಣೆ, ಸಂಸ್ಕೃತಿ ಬಿಟ್ಟುಕೊಟ್ಟಿಲ್ಲ. ಈ ವಿವಿಧತೆಯಲ್ಲಿ ಏಕತೆಯೇ ಭಾರತದ ಸಂಪತ್ತು ಮತ್ತು ಭಾರತೀಯರ ಲಕ್ಷಣವಾಗಿದೆ. ಅದೇನೇ ಇದ್ದರೂ ಇಲ್ಲಿ ಆಚರಿಸುವ ವಿವಿಧ ಹಬ್ಬಗಳಲ್ಲಿ ದೀಪಾವಳಿ ವಿಶೇಷವಾದ ಬೆಳಕಿನ ಹಬ್ಬವಾಗಿದೆ. ಜೀವನದಲ್ಲಿ ತುಂಬಿರುವ ಅಂಧಕಾರ, ಕತ್ತಲು ಕರಗಿ ಸುಖ, ಶಾಂತಿ, ನೆಮ್ಮದಿ ನೆಲೆಸಲಿ ಎಂಬ ಆಶಯದೊಂದಿಗೆ ದೀಪಾವಳಿಯನ್ನು ಪ್ರತಿ ವರ್ಷದ ಅಕ್ಟೋಬರ ತಿಂಗಳಲ್ಲಿ ಆಚರಿಸಲಾಗುತ್ತದೆ. ದೀಪಾವಳಿ ಎಂದರೆ ದೀಪಗಳ ಸಾಲು ಎಂದರ್ಥ; ದೀಪಗಳಿಂದ ದೀಪಗಳನ್ನು ಹಚ್ಚುವುದರ ಜೊತೆಗೆ ಕತ್ತಲೆಯನ್ನು ಹೋಗಲಾಡಿಸಿ ಮನೆ ಹಾಗೂ ಮನದ ಕತ್ತಲೆಯನ್ನು ನಿವಾರಿಸಿ ಬೆಳಕನ್ನು ಉಂಟು ಮಾಡುವ ಹಬ್ಬವೇ ದೀಪಾವಳಿ. ಮುಂಗಾರು ಬೆಳೆ ಕೊಯ್ಲಿಗೆ ಬರುವ ಸಮಯದಲ್ಲಿ ಈ ಹಬ್ಬ ಬರುವುದು ವಿಶೇಷ.

ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ದೀಪಾವಳಿಗೆ ಅದರದೇಯಾದ ಮಹತ್ವವಿದೆ; ಹಾಗೂ ಅವರದೇಯಾದ ಸಂಪ್ರದಾಯಗಳು ಇರುತ್ತವೆ. ಕೆಲವರು ತಮ್ಮ ಸಂಪ್ರದಾಯಕ್ಕೆ ತಕ್ಕಂತೆ ಹಬ್ಬವನ್ನು ಆಚರಿಸುತ್ತಾರೆ. ಆದರೆ ಎಲ್ಲರ ಪ್ರಕಾರ ದೀಪಾವಳಿ ರಾಮಾಯಣದ ಕಥೆಗೆ ಹೊಂದಿಕೊಂಡಿದೆ. ರಾವಣನನ್ನು ಸಂಹಾರ ಮಾಡಿ ರಾಮ ಸೀತಾ, ಲಕ್ಷ್ಮಣನ ಜೊತೆಗೆ ಅಯೋಧ್ಯಗೆ ಹಿಂದಿರುಗಿದ ದಿನವಲ್ಲದೆ ರಾಮ ಪಟ್ಟಾಭಿಷೇಕಗೊಂಡ ದಿನ. ಪಾಂಡವರು ಕೂಡ ಅದೇ ದಿನ ತಮ್ಮ ಅಜ್ಞಾತವಾಸವನ್ನು ಮುಗಿಸಿದ ದಿನ ಎನ್ನುವ ಕಥೆಗಳಿವೆ. ಆದರೆ ಈ ಹಬ್ಬಕ್ಕೆ ವೈಜ್ಞಾನಿಕ ಕಾರಣಗಳಿದ್ದರೂ ಕೂಡ ಜನರು ಕತೆಗಳನ್ನು ನಂಬುತ್ತಾರಾದರಿಂದ ಜನರು ಸಂತೋಷದಿಂದ ದೀಪಾವಳಿಯನ್ನು ಆಚರಿಸುತ್ತಾರೆ.

ನಮ್ಮೂರಿನ ಸುತ್ತಮುತ್ತ ಆಚರಿಸುವ ದೀಪಾವಳಿ ಹಬ್ಬ ಮೇಲಿನ ಆಚರಣೆಗಳಿಗಿಂತ ಭಿನ್ನವಾಗಿ ಆಚರಿಸುತ್ತಾರೆ ಆದರೂ ನಂಬಿಕೆಗಳು ಮಾತ್ರ ಮೇಲಿನ ಕತೆಗಳನ್ನೆ ಅವಲಂಬಿಸಿವೆ. ಐದು ದಿನಗಳ ನಿರಂತರ ಕಾಲ ಆಚರಿಸುತ್ತಾರೆ. ಹಬ್ಬದ ದಿನ ದೀಪಗಳನ್ನು ಮನೆಯಲ್ಲಿ ಹಚ್ಚಿ ಮನೆಯನ್ನು ಸಿಂಗರಿಸುತ್ತಾರೆ. ಹಬ್ಬವು ಪ್ರಾರಂಭವಾದ ದಿನದಿಂದ ಐದು ದಿನಗಳವರೆಗೂ ನಡೆಯುತ್ತದೆ; ಒಂದೊಂದು ದಿನಕ್ಕೂ ಒಂದೊಂದು ವಿಶೇಷವಾದ ಹೆಸರುಗಳು ಮತ್ತು ಆಚರಣೆಗಳು. ಕೆಲವರು ಐದು ದಿನಗಳ ಕಾಲ ಆಚರಿಸಿದರೆ ಕೆಲವರು ಕೊನೆಯ ಎರಡು ದಿನ ಮಾತ್ರ ಹಬ್ಬ ಆಚರಿಸುತ್ತಾರೆ. ಮೊದಲ ದಿನ ಚತುರ್ದಶಿ ಎಂದು ಎರಡನೆಯ ದಿನ ನೀರು ತುಂಬುವ ದಿನವೆಂದು ಮೂರನೆಯ ದಿನ ಭರಮನ ಹಬ್ಬವೆಂದು ನಾಲ್ಕನೆಯ ದಿನ ಅಮವಾಸೆ ದಿನ ಅಥವಾ ನರಕ ಚತುರ್ಥಿ

ಎಂದು ಐದನೆಯ ದಿನ ಬಲಿ ಪಾಢ್ಯ ಎಂಬ ಹೆಸರುಗಳಲ್ಲಿ ಐದು ದಿನ ದೀಪಾವಳಿ ಆಚರಿಸುತ್ತಾರೆ. ದೀಪಾವಳಿ ಪ್ರಾರಂಭದ ಮೊದಲ ದಿನದಿಂದ ಐದನೆಯ ದಿನದವರೆಗೂ ಮನೆಯಲ್ಲಿ ದೀಪಗಳನ್ನು ಹಚ್ಚುತ್ತಾರೆ. ಇನ್ನೂ ಕೆಲವರು ಕೊನೆ ಎರಡು ದಿನವಷ್ಟೆ ದೀಪಗಳನ್ನು ಹಚ್ಚುತ್ತಾರೆ. ಚತುರ್ದಶಿ ಎಂಬ ಮೊದಲ ದಿನದಂದು ಕೆಲವರು ಎಣ್ಣೆ ಸ್ನಾನ ಮಾಡಿ ವಿಶೇಷವಾದ ಊಟ ಮಾಡುತ್ತಾರೆ. ನೀರು ತುಂಬುವ ಎಂಬ ಎರಡನೇ ದಿನದಂದು ಶಾವಿಗೆ ಊಟದ ಜೊತೆಗೆ ವಿಶೇಷ ಊಟವನ್ನು ಮಾಡುವುದರ ಜೊತೆಗೆ ವಿಶೇಷ ಸ್ನಾನವನ್ನು ಮಾಡುತ್ತಾರೆ. ಮೂರನೆಯ ದಿನ ಭರಮನ ಹಬ್ಬದ ದಿನ. ಅಂದು ಐದು ತರಹದ ಅಡುಗೆ ಮಾಡುತ್ತಾರೆ. ಅವತ್ತು ಸಂಜೆ ಎಂಟರಿಂದ ಎಳ್ಳಿನ ಹೊಳಿಗೆ, ಕಡಬು ವಿಶೇಷ ಅಡುಗೆಗಳು ಪ್ರಾರಂಭವಾಗುತ್ತವೆ. ಇದು ಹೆಣ್ಣು ದೇವರಾಗಿದ್ದು ಪೂಜೆ ಮಾಡಬೇಕಾದರೆ ಮೂಕ ವೃತದಿಂದ ಮಾಡಬೇಕು. ಜೊತೆಗೆ ಬಳೆಗಳ ಶಬ್ದವು ಕೇಳದ ಹಾಗೆ ನಡೆಸಬೇಕು. ಒಂದು ಕೊಡಕ್ಕೆ ಶೃಂಗಾರ ಮಾಡಿ ಜೊತೆಗೊಂದು ಬೆತ್ತದ ಬಡಿಗೆಯನ್ನು ಇಟ್ಟು ಪೂಜಿಸುತ್ತಾರೆ. ಮಾಡಿದಡಿಗೆ ನೈವೇದ್ಯ ಹಿಡಿದ ನಂತರ ಮನೆಯವರು ಊಟ ಮಾಡುತ್ತಾರೆ. ಈ ಹಬ್ಬದ ದಿನ ಮನೆಯಿಂದ ಯಾರಿಗೂ ಏನೂ  ಹೊರಗೆ ಕೊಡುವಂತಿಲ್ಲ. ಮತ್ತು ಹೊರಗಡೆಯಿಂದ ಸಂಬಂಧಿಕರು ಯಾರೂ ಮನೆಗೆ ಬರುವಂತಿಲ್ಲ. ಆಕಸ್ಮಿಕವಾಗಿ ಬಂದರೆ ಮನೆಯಲ್ಲಿಯೇ ಉಳಿಯಬೇಕು; ಇಲ್ಲವಾದರೆ ಮನೆಯ ಹೊರಗೆ ನಿಂತು ಮಾತನಾಡಿ ಹೋಗುವ ಪದ್ದತಿ ಇದೆ. ಅನಿವಾರ್ಯವಾಗಿ ಹೋಗುವ ಪ್ರಸಂಗ ಬಂದರೇ ಒಂದು ಕರವಸ್ತ್ರವನ್ನಾದರೂ ಬಿಟ್ಟು ಹೋಗಬೇಕು. ಇನ್ನೂ ನಾಲ್ಕನೆಯ ದಿನ ಅಮವಾಸೆ. ಅಂದು ಮನೆಯಲ್ಲಿ ಲಕ್ಷ್ಮೀ ಪೂಜೆ ನಡೆಯುತ್ತದೆ. ಒಂದು ಕೊಡಕ್ಕೆ ಲಕ್ಷ್ಮೀಯಂತೆ ಶೃಂಗಾರ ಮಾಡಿ ಮುಂದೆ ಹಣ್ಣು ಹಂಪಲಗಳನ್ನು ಇಟ್ಟು ಹೆಣ್ಣು ಮಕ್ಕಳು ಮನೆಮನೆಗೆ ಹೋಗಿ ಆರತಿ ಬೆಳಗಿ ಪೂಜೆ ಸಲ್ಲಿಸುತ್ತಾರೆ. ಜೊತೆಗೆ ಕಿರಾಣಿ ಅಂಗಡಿಗಳ ಮತ್ತು ವಾಹನಗಳ ಪೂಜೆಯು ನಡೆಯುತ್ತದೆ.

ದೀಪಾವಳಿಯ ಕೊನೆಯ ದಿನ ಅಂದರೆ ಐದನೆಯ ದಿನ ಸಗಣಿಯಿಂದ ಪಾಂಡುರುಗಳನ್ನು ಮಾಡುತ್ತಾರೆ. ಇವಕ್ಕೆ ಹೊಟ್ಟೆವ್ವ ಎಂದು ಕರೆಯುವುದು ವಾಡಿಕೆ. ಇವುಗಳಿಗೆ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಹೀಗೆ ಮಾಡಿದ ಪಾಂಡುರಗಳನ್ನು ಮನೆಯಲ್ಲಿನ ಪ್ರತಿ ಬಾಗಿಲಿನ ಎಡ ಮತ್ತು ಬಲಕ್ಕೆ ಐದು ಗುಂಪುಗಳಂತೆ ಇಡುತ್ತಾರೆ. ಇದು ಅಮವಾಸೆಯ ದಿನದ ರಾತ್ರಿ ನಡೆಯುತ್ತದೆ. ಇದಾದ ನಂತರ ಐದನೆ ದಿನ ಬೆಳಿಗ್ಗೆ ಹೋಳಿಗೆ ಮತ್ತು ಗೋಧಿ ಹುಗ್ಗಿ ಮಾಡುತ್ತಾರೆ. ಜೊತೆಗೆ ಅಮವಾಸೆ ದಿನ ಕೆಲವರು ಲಕ್ಷ್ಮೀ ಪೂಜೆ ಮಾಡದವರು ಇವೆಲ್ಲವನ್ನು ಐದನೆ ದಿನವೆ ಮಾಡುತ್ತಾರೆ. ಪಾಂಡುರುಗಳಲ್ಲಿ ಎರಡು ಹಿರಿಯ ಪಾಂಡುರುಗಳನ್ನು ಮಾಡುತ್ತಾರೆ. ಒಂದು ಗಂಡಾದರೆ, ಇನ್ನೊಂದು ಹೆಣ್ಣು ಪಾಂಡುರು. ಇವನ್ನು ರಾಜ ಮತ್ತು ರಾಣಿ ಎಂದು ಕರೆಯುತ್ತಾರೆ. ಹೆಣ್ಣು ಪಾಂಡುರನ್ನು ಲಕ್ಷ್ಮೀಗೆ ಹೋಲಿಸುತ್ತಾರೆ. ಇವು ಗಾತ್ರದಲ್ಲಿ ಎಲ್ಲಕಿಂತ ದೊಡ್ಡವು. ಉಳಿದ ಪಾಂಡುರು ಸಣ್ಣ ಗಾತ್ರದವು. ಜನ ತಮಗೆ ಅನುಕೂಲವಾದಷ್ಟು ಪಾಂಡುರುಗಳನ್ನು ಮಾಡುತ್ತಾರೆ. ಮುಂದೆ ಇವು ಒಣಗಿದಾಗ ಕೃಷಿ ಕೆಲಸದಲ್ಲಿ ಇದ್ದಿಲುಗಳಂತೆ ಬಳಕೆಯಾಗುತ್ತವೆ. ಈ ಪಾಂಡುರುಗಳನ್ನು ಬಾಗಿಲುಗಳ ಮುಂದೆ ಇಟ್ಟಾಗ ಅಲ್ಲಿಂದಲೆ ಇವುಗಳ ಹೆಜ್ಜೆಗಳನ್ನು ಮೂಡಿಸುತ್ತಾರೆ. ಬೆರಳಿನಿಂದ ನಾಲ್ಕು ನಾಲ್ಕು ಹೆಜ್ಜೆಗಳನ್ನು ಇಡುತ್ತ ಪ್ರತಿ ಬಾಗಿಲಿನಿಂದ ಹೆಜ್ಜೆ ಪ್ರಾರಂಭವಾಗಿ ಎಲ್ಲವೂ ಒಂದೆಡೆ ಸಂದಿಸುವಂತೆ ಮಾಡಿ ಕೊನೆಗೆ ಮನೆಯ ಹೊರಗೆ ಇಟ್ಟ ಪಾಂಡುರು ಕಡೆ ಹೋಗಿ ಮುಗಿಯುತ್ತವೆ. ಈ ಹೆಜ್ಜೆಗಳಿಗೂ ಒಂದು ವಿಶೇಷತೆ ಇದೆ. ಪಾಂಡವರು ವನವಾಸದಿಂದ ಅಯೋಧ್ಯಗೆ ಬರುವ ದಿನವಾದರಿಂದ ಅವರ ಹೆಜ್ಜೆಗಳ ನೆನಪಿಗಾಗಿ ಕೆಲವರು ಇಟ್ಟರೆ, ಮತ್ತೆ ಕೆಲವರು ರಾಜ ಮತ್ತು ರಾಣಿ ಈ ಪಾಂಡುರುಗಳು ಮನೆಯಲ್ಲಿ ನಡೆದಾಡುತ್ತವೆ; ಎಂಬ ನಂಬಿಕೆಯಿಂದ ಹೆಜ್ಜೆಗಳನ್ನು ಮೂಡಿಸುತ್ತಾರೆ. ಎರಡು ಹೆಜ್ಜೆ ಹಿರಿಯ ಗಂಡು ಹೊಟ್ಟೆವ್ವನದು ಆದರೆ ಇನ್ನುಳಿದ ಎರಡು ಹೆಜ್ಜೆ ಹಿರಿಯ ಲಕ್ಷ್ಮೀ ಹೊಟ್ಟೆವ್ವನದು ಆಗಿರುತ್ತವೆ. ಅದಕ್ಕಾಗಿ ನಾಲ್ಕು ನಾಲ್ಕು ಹೆಜ್ಜೆಗಳನ್ನು ಇಡುವ ಪದ್ದತಿ ಇದೆ. ಈ ಪಾಂಡುರುಗಳಿಗೆ ಉತ್ರಾನಿ ಮತ್ತು ಹೊನ್ನಾರಿ ಹೂವುಗಳನ್ನು ಚುಚ್ಚುತ್ತಾರೆ. ಈ ದಿನದ ಸಂಜೆ ವೇಳೆಗೆ ಎಲ್ಲ ಪಾಂಡುರುಗಳನ್ನು ಮನೆಯ ಮಾಳಿಗೆಯ ಮೇಲೆ ಇಟ್ಟು ಪೂಜೆ ಮಾಡುತ್ತಾರೆ. ಮನೆಯ ಮಾಳಿಗೆ ಮೇಲಿಡಲು ಬೇರೆ ಬೇರೆ ನಂಬಿಕೆಗಳು ಇವೆ ಅದರಲ್ಲಿ ಕೆಲವರ ನಂಬಿಕೆ ಪ್ರಕಾರ ಅವು ಮನೆಗೆ ಮತ್ತು ತಮಗೆ ಬರುವ ಕಷ್ಟಗಳಿಂದ ಕಾಪಾಡುವ ದೇವರುಗಳಾಗಿವೆ. ಇವತ್ತೀನ ಈ ಐದನೆ ದಿನದ ಆಚರಣೆಗಳಲ್ಲಿ ಇನ್ನೊಂದು ವಿಶೇಷವೆಂದರೆ

ಮನೆಯ ಹೊರಗೆ ಆಕಾಶಬುಟ್ಟಿ ನೆತು ಬಿಡುವುದು. ಈ ಆಕಾಶಬುಟ್ಟಿಯನ್ನು ಮೊದಲು ಬಣ್ಣದ ಕಾಗದ, ಸಿಬಿರುಗಳಿಂದ ಮನೆಯಲ್ಲಿ ತಯಾರಿಸಿ ಒಳಗೆ ಒಂದು ದೀಪವಿಟ್ಟು ಮನೆಯ ಹೊರಗೆ ನೆತು ಹಾಕುವರು. ಇದನ್ನು ಒಂದು ತಿಂಗಳ ವರೆಗೆ ಪಾಲಿಸುತ್ತಾರೆ. ದಿನವು ಆ ಬುಟ್ಟಿಯನ್ನು ಕೆಳಗಿಳಿಸಿ ದೀಪಕ್ಕೆ ಎಣ್ಣೆ, ಬತ್ತಿ ಹಾಕಿ ಮೇಲಿರಿಸುವರು. ಆದರೆ ಇತ್ತೀಚಿನ ದಿನಗಳಲ್ಲಿ ಆಕಾಶಬುಟ್ಟಿಯನ್ನು ಅಂಗಡಿಗಳಲ್ಲಿ ಕೊಂಡು ಅದರೊಳಗೆ ಒಂದು ಲೈಟು ಉರಿಯುವಂತೆ ವ್ಯವಸ್ಥೆ ಮಾಡಿ ಮನೆಯ ಹೊರಗೆ ತಿಂಗಳ ಕಾಲ ಹಾಕುವರು. ತಿಂಗಳು ಕಳೆದ ಮೇಲೆ ಆಕಾಶಬುಟ್ಟಿಗೆ ಪೂಜೆ ಸಲ್ಲಿಸಿ ತೆಗೆಯಲಾಗುತ್ತದೆ. ಈ ರೀತಿಯಾಗಿ ನಿರಂತರ ಪೂಜೆಗಳು ನಡೆಯುತ್ತವೆ.

**ಉಪಸಂಹಾರ**

ಪ್ರಸ್ತುತ ದಿನಗಳಲ್ಲಿ ಮೇಲೆ ಹೇಳಿದ ಆಚರಣೆಗಳಲ್ಲಿ ಕೆಲವೊಂದಿಷ್ಟು ಬದಲಾವಣೆಗಳಾಗಿವೆ. ಉತ್ರಾನಿ ಮತ್ತು ಹೊನ್ನಾರಿ ಹೂವಗಳು ಸಿಗದೇ ಈಗ ಚಂಡು ಹೂಗಳನ್ನು ಬಳಸುತ್ತಾರೆ. ಮನೆಯ ಹೊರಗಡೆ ದೀಪಗಳನ್ನು ಹಚ್ಚುವ ಬದಲು ಪಟಾಕಿಗಳನ್ನು ಸಿಡಿಸುತ್ತಿದ್ದಾರೆ. ಇದರಿಂದ ಪ್ರತಿಕೂಲ ವಾತಾವರಣ ನಿರ್ಮಾಣವಾಗುತ್ತಿದೆ. ಇನ್ನು ಈ ಹಬ್ಬವನ್ನು ವೈಚಾರಿಕ ದೃಷ್ಟಿಕೋನದಲ್ಲಿ ನೋಡಿದರೆ, ಇದರ ತಿರುಳೇ ಬೇರೆಯಾಗುತ್ತದೆ. ಬೌದ್ಧರ ಮತ್ತು ಮೂಲನಿವಾಸಿಯಾದ ಬಲಿ ಚಕ್ರವರ್ತಿಯ ಕೊಲೆಯಾದ ಸಂಗತಿಗಳನ್ನು ಮುಚ್ಚಿ ಹಾಕಲು ಮೇಲಿನ ರೀತಿಯಲ್ಲಿ ಆಚರಣೆಗಳನ್ನು ತರಲಾಗಿದೆ ಎಂಬ ವಾದಗಳು ಇವೆ. ಇದರ ಪರಿವೆ ಇಲ್ಲದ ಮುಗ್ದ ಜನರು ಪರಂಪರೆಯಂತೆ ಆಚರಣೆ ಮಾಡುತ್ತಾ ಬಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ಹಬ್ಬದ ವಿಶೇಷತೆಗಳು ಕಡಿಮೆಯಾಗುತ್ತಿವೆ ಎಂಬುದು ಸತ್ಯ.

**ವಕ್ತೃ:**

| | ಹೆಸರು | ವಯಸ್ಸು | ಜಾತಿ | ಊರು |
|---|---|---|---|---|
| 1. | ಮಾಹಾದೇವಿ ಪಾಟೀಲ | 60 | ಲಿಂಗಾಯತ | ಹಿಟ್ಟಣಗಿ |
| 2. | ರೇಖಾ ಮಲ್ಲಾಪೂರ | 40 | ಲಿಂಗಾಯತ | ಸುತಗಟ್ಟಿ |
| 3. | ವಿದ್ಯಾ ವಾಲಿ | 40 | ಲಿಂಗಾಯತ | ಬೆಳವಡಿ |
| 4. | ಈರಪ್ಪ ಸಂಪಗಾಂವ | 60 | ಲಿಂಗಾಯತ | ಹಿಟ್ಟಣಗಿ |

**ಪರಾಮರ್ಶನ ಗ್ರಂಥಗಳು**

[1] ಶೇಷಗಿರಿ ರಾವ್ ಎಲ್.ಎಸ್. ಹೊಸಗನ್ನಡ ಸಾಹಿತ್ಯ ಚರಿತ್ರೆ, 2018, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು-560 009.
[2] ಶಿವರಾಮ ಕಾರಂತ, ಮರಳಿ ಮಣ್ಣಿಗೆ, ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಂಗಳೂರು-560 009.